# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ಎಂದಿನಂತೆ ದಿನಾಂಕ:- 17.12.2022 ರಂದು ಬೆಳಿಗ್ಗೆ 11.00 ಗಂಟೆಗೆ ಅಧ್ಯಕ್ಷರ ಆಗಮನದೊಂದಿಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ:-42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

1. ಶ್ರೀ. ರಮೇಶ್ ಎನ್. ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಶ್ರೀಮತಿ. ನಿರ್ಮಲ ಕೆ. ಕಂದಾಯ ಪರಿವೀಕ್ಷಕರು ವಾರ್ಡ್ ನಂ.42.
3. ಶ್ರೀ. ನಾರಾಯಣ ಸ್ವಾಮಿ, ಸೂಪರ್ ವೈಸರ್ ಎಸ್. ಡಬ್ಲ್ಯೂ.ಎಂ.
4. ಶ್ರೀ. ದೇವರಾಜು, ಮೇಲ್ವಿಚಾರಕರು, ವಾರ್ಡ್ ನಂ.42.
5. ಶ್ರೀಮತಿ. ವಲರ್ಮದಿ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.42.
6. ಶ್ರೀ. ನಾಗರಾಜು, ಸೂಪರ್ ವೈಸರ್.
7. ಶ್ರೀ. ಮುತ್ಯಾಲಪ್ಪ, ಸೂಪರ್ ವೈಸರ್.
8. ಶ್ರೀಮತಿ. ಪ್ರಮಿಳ ಎಂ.ಸಿ. ಲಿಂಕ್ ವರ್ಕರ್ಸ್, ಎಸ್.ಡಬ್ಲ್ಯೂ.ಎಂ.
9. ಶ್ರೀಮತಿ. ಧಾಕ್ಷಾಯಣಿ, ಎಂ. .ಸಿ. ಲಿಂಕ್ ವರ್ಕರ್ಸ್, ಎಸ್.ಡಬ್ಲ್ಯೂ.ಎಂ.
10. ಶ್ರೀ. ಮಂಜುನಾಥ್.ಬಿ.ಸಿ. ಕಿರಿಯ ಅಭಿಯಂತರರು, ಬೆಸ್ಕಾಂ, ವಾರ್ಡ್ ನಂ.42.

**ಸಭೆಗೆ ಗೈರು ಹಾಜರಿದ್ದ ಅಧಿಕಾರಿಗಳು:-**

01. ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳು
02. ಬೀದಿ ದೀಪಗಳ ಪರಿವೀಕ್ಷಕರು
03. ಪಶು ಸಂಗೋಪನೆ ಇಲಾಖೆ ವಾರ್ಡ್-42.
04. ಅಗ್ನಿ ಶಾಮಕ ಠಾಣೆ, ಟಿ.ವಿ.ಎಸ್.ಕ್ರಾಸ್ ಪೀಣ್ಯ,
05. ಬಿಡ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು.
06. ಪೋಲಿಸ್ ಇಲಾಖೆ(ಕಾನೂನು ಮತ್ತು ಸುವ್ಯವಸ್ಥೆ).
07. ಪೋಲಿಸ್ ಇಲಾಖೆ ಸಂಚಾರ.

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಗಳು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯನ್ನು ಆರಂಭಿಸಿದರು.

ಜ್ಯೋತಿ.ಎಸ್ (ಎನ್.ಜಿ.ಒ) ರವರು ಮಾತನಾಡಿ ಸರ್ಕಾರಿ ಆಸ್ಪತ್ರೆ ಜೈ ಭುವನೇಶ್ವರಿ ನಗರದ ಬಳಿ ಇರುವ ಚರಂಡಿಯ ಸ್ಲಾಬ್‌ಗಳು ಹೊಡೆದಿದ್ದು ಮಕ್ಕಳು ಮತ್ತು ಜಾನುವಾರುಗಳ ಸಂಚಾರಕ್ಕೆ ತೊಂದರೆಯಗುತ್ತಿದ್ದು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳಬೇಕೆಂದು ವಿನಂತಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೊರಗುಂಟೆಪಾಳ್ಯ ಉಪವಿಭಾಗ, ಬಿ.ಬಿ.ಎಂ.ಪಿ**

ನಾರಯಣ ಸ್ವಾಮಿ ರವರು ಮಾತಾನಾಡಿ ಇ.ಎಸ್.ಐ.ಸಿ ಆಸ್ಪತ್ರೆ ರಸ್ತೆ ಹಾಗೂ ಕಂಠೀರವ ಸ್ಟೂಡಿಯೋ ಮೈನ್ ರೋಡ್ ರಸ್ತೆಗಳ ಬದಿಯಲ್ಲಿ ವಾಹನಗಳನ್ನು ನಿಲ್ಲಿಸುವ ಕಾರಣ ಸರಿಯಾಗಿ ಪೌರ ಕಾರ್ಮಿಕರಿಗೆ ಕಸ ಹೊಡೆಯಲು ಸಾದ್ಯವಾಗುತ್ತಿಲ್ಲದ ಕಾರಣ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು.

**ಕ್ರಮ : ಪೋಲಿಸ್ ಇಲಾಖೆ ಸಂಚಾರ, ನಂದಿನಿ ಲೇಔಟ್.**

ದಾಕ್ಷಯಣಿ ರವರು ಮಾತಾನಾಡಿ ನಂದಿನಿ ಲೇಔಟ್ 3ನೇ ಬ್ಲಾಕ್ ಮುನೇಶ್ವರ ದೇವಸ್ಥಾನದ ಬಳಿಯಿರುವ ರಸ್ತೆಯು ಹಾಳಾಗಿದ್ದು ಸಾರ್ವಜನಿಕರ ಓಡಾಟಕ್ಕೆ ತೊಂದರೆಯುಂಟಾಗಿದ್ದು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೊರಗುಂಟೆಪಾಳ್ಯ ಉಪವಿಭಾಗ, ಬಿ.ಬಿ.ಎಂ.ಪಿ**

ಲಿಂಕ್ ವರ್ಕ್‌ರ್‌ಗಳಾದ ಪ್ರಮಿಳ ಹಾಗೂ ದಾಕ್ಷಾಯಣಿ ರವರು ಮಾತನಾಡಿ ಸಭೆಯಲ್ಲಿ ಹಾಜಾರಿದ್ದು ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ **"ಸ್ವಚ್ಚತ ಹ್ಯಾಪ್"** ಬಗ್ಗೆ ಅರಿವು ಮೂಡಿಸಿ ಎಲ್ಲರು ತಮ್ಮ ಮೊಬೈಲ್ ಫೋನ್‌ಗಳಲ್ಲಿ ಹ್ಯಾಪ್‌ಅನ್ನು ಡೌನಲೋಡ್ ಮಾಡಲು ತಿಳಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Manjunath.K

**(ಶ್ರೀ. ಮಂಜುನಾಥ ಕೆ.)**
**ಸಹಾಯಕ ಅಭಿಯಂತರರು**
**ಮತ್ತು ಕಾರ್ಯದರ್ಶಿ**
**ವಾರ್ಡ್–42.**

**(ಶ್ರೀ.ಎನ್.ರಮೇಶ್)**
**ಸಹಾಯಕ ಕಂದಾಯ ಅಧಿಕಾರಿಗಳು**
**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**

**ಪ್ರತಿಯನ್ನು:-**

1. ವಲಯ ಆಯುಕ್ತರು, ರಾರಾನವ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ವಲಯ ಜಂಟಿ ಆಯುಕ್ತರು, ರಾರಾನವ ರವರ ಅವಗಾಹನೆಗೆ ಸಲ್ಲಿಸಿದೆ.
3. ಅಧೀಕ್ಷಕ ಅಭಿಯಂತರರು, ವಾರ್ಡ್‌ಕಮಿಟಿ ಮೇಲುಸ್ತುವಾರಿ ಅಧಿಕಾರಿಗಳು, ರಾರಾನವ ರವರ ಅವಗಾಹನೆಗೆ ಸಲ್ಲಿಸಿದೆ.